ಕಲ್ಪನೆ ಕಾವ್ಯ

# ಗೋಲ್ಡ್ ಫಿಶ್ ಡ್ರೀಮ್ಸ್!

ಶ್! ಶ್! ಶ್! ಸುಮ್ಮನಿರಿ
ಗೋಲ್ಡ್‌ಫಿಶ್ ಕನಸುಕಾಣುತ್ತಿದೆ
ಎಚ್ಚರಗೊಳಿಸಬೇಡಿ, ಪ್ಲೀಸ್
ನೆಮ್ಮದಿ ನಿದ್ರೆಯ ಕಸಿಯಬೇಡಿ.

ನನ್ನ ಮುದ್ದಿನ ಗೋಲ್ಡ್‌ಫಿಶ್
ಜೊತೆ ಜೊತೆಯೇ ಬರುವುದು
ಮೇರಿಯ ಹಿಂದೆ ಬರುತ್ತಿದ್ದ
ತುಂಟ ಮರಿ ಕುರಿಯಂತೆ.

ಶಾಲೆಗೂ ನಾನು ಕರೆದೊಯ್ಯುವೆ
ಟೀಚರ್‌ಗೂ ಫಿಶ್ ತೋರಿಸುವೆ
ಫ್ರೆಂಡ್‌ಗೂ ಅದನ್ನ ಪರಿಚಯಿಸುವೆ
ಅದಕ್ಕೊಂದು ಚೆಂದದ ಹೆಸರಿಡುವೆ.

ಹೋಮ್‌ವರ್ಕ್ ಮಾಡುವಾಗ
ಜೊತೆಗಿರುವುದು
ಟೇಬಲ್ ತುದಿಯಲಿ ಆಡುವುದು
ಬುರುಬುರು ಗುಳ್ಳೆ ಬಿಡುವುದು
ಆಕಡೆ ಈಕಡೆ ತಿರುಗುವುದು.

ಫಿಶ್‌ಫುಡ್ ಮಾತ್ರ ತಿನ್ನುವ ಮೀನು
ತಂಟೆ ತರಲೆ ಮಾಡುವುದೇ ಇಲ್ಲ
ತನ್ನಷ್ಟಕ್ಕೇ ತಾನು ಆಡುವುದು ಮಾತು
ಗಿರಗಿರ ಗಿರಕಿ ಹೊಡೆಯುವುದು.

ಗಾಜಿನ ಭರಣಿ ಬೀಳಿಸಬೇಡಿ
ಗೋಲ್ಡ್‌ಫಿಶ್ ಕನಸು ಕಸಿಯಬೇಡಿ
ನನ್ನ ಗೆಳೆಯನ ಸೆಲ್ಫೀ ತೆಗೆಯದಿರಿ
ನಿಮ್ಮ ಮನೆಗೂ ಒಂದು ತರದೇ ಇರದಿರಿ

● ಬೇದ್ರೆ ಮಂಜುನಾಥ



# ಹೋಲಿಕೆ

ಮೀನಿನ ಚಲನವಲನಕೂ
ಮುಗ್ಧ ಬಾಲೆಯ ಮನಸಿಗೂ
ಉಂಟು ಒಂದು ಸಾಮ್ಯ

ಒಮ್ಮೆ ಆಚೆ ಒಮ್ಮೆ ಈಚಿನ
ಹೊಯ್ದಾಟ ನೋಡಲು
ಅತಿ ರಮ್ಯ

ನೇರವಲ್ಲ ಮೀನ ನಡೆ–
ಇರದಿರಲೂ ಯಾವ
ಅಡೆ ತಡೆ.

ಮಗುವಿನ ಮನಸು
ಅತಿ ಚಂಚಲ
ಅದಕಿಲ್ಲ ಅಡ್ಡಗೋಡೆ.

ಮೀನಿನ ಬಾಯಿ
ಸದಾ ಆಡುತ್ತಿರುವುದು
ಏನೋ ಮೆಲ್ಲುವಂತೆ.

ಪೋರಿಯ ಚಿರನಗು
ಕೂಡ ಹುಣ್ಣಿಮೆಯ
ಬೆಳದಿಂಗಳು ಚೆಲ್ಲುವಂತೆ.

● ದೀಪಕ ಜೋಶಿ